# ದಿನಾಂಕ 16-7-2022ರಂದು ನಡೆದ "ಒಣಮೀನು ಸಂಬಂಧೀ ವಿಷಯಗಳ ಕುರಿತಾದ ಸಲಹಾತ್ಮಕ ಕಮ್ಮಟ"ದ ನಡಾವಳಿಗಳು

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಛೇರಿ ಆವರಣದಲ್ಲಿರುವ ನೇತ್ರಾವತಿ ಸಭಾಂಗಣದಲ್ಲಿ ದಿನಾಂಕ 16-07-2022ರಂದು ನಡೆದ "ಒಣಮೀನು ಸಂಬಂಧೀ ವಿಷಯಗಳ ಕುರಿತಾದ ಸಲಹಾತ್ಮಕ ಕಮ್ಮಟ"ದಲ್ಲಿ ನಡೆದ ಚರ್ಚೆಯ ವಿವರಗಳನ್ನು ಇಲ್ಲಿ ನೀಡಲಾಗಿದೆ. ಈ ಕಮ್ಮಟವನ್ನು ಬೆಂಗಳೂರಿನ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ, ಹೊನ್ನಾವರದ ಸ್ನೇಹಕುಂಜ ಟ್ರಸ್ಟ್, ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಇವುಗಳ ಸಹಭಾಗಿತ್ವದಲ್ಲಿ ಏರ್ಪಡಿಸಲಾಗಿತ್ತು. ಕರ್ನಾಟಕದಲ್ಲಿ ಒಣಮೀನು ಉತ್ಪಾದನೆ ಹಾಗೂ ಮಾರಾಟದ ಪ್ರಾಮುಖ್ಯತೆ ಕುರಿತು ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಮೂಲಕ ನಡೆಸಲಾದ ಸಂಶೋಧನೆಯನ್ನು ಈ ಕಮ್ಮಟದಲ್ಲಿ ವಿವರಿಸಲಾಯಿತು.

ಸ್ನೇಹಕುಂಜ ಟ್ರಸ್ಟ್‌ನ ಮುಖ್ಯಸ್ಥರಾದ ಪ್ರೊಫೆಸರ್ ರಾಮಚಂದ್ರ ಭಟ್ಟ ಅವರು ಕಮ್ಮಟದ ಅತಿಥಿಗಳನ್ನು ಹಾಗೂ ಆಗಮಿತರನ್ನು ಸ್ವಾಗತಿಸಿದರು. ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ಪ್ರೊಫೆಸರ್ ಅಮಲೇಂದು ಜ್ಯೋತಿಷಿಯವರು ಸಂಶೋಧನೆಗಳ ಹಾಗೂ ಕಮ್ಮಟದ ಉದ್ದೇಶಗಳ ಬಗ್ಗೆ ವಿವರಿಸಿದರು. ಒಣಮೀನು ಉತ್ಪಾದನೆ ಮತ್ತು ಬಳಕೆಯ ಬಗ್ಗೆ ಸರಕಾರದಿಂದ ಹಾಗೂ ಸಂಶೋಧಕರಿಂದ ಇಲ್ಲಿಯವರೆಗೆ ಹೆಚ್ಚಿನ ಆಸಕ್ತಿ ಇದ್ದಿರುವುದಿಲ್ಲವಾಗಿ ಈ ಪರಿಸ್ಥಿತಿಯನ್ನು ಬದಲಾಯಿಸಸುವುದು ಅಗತ್ಯ ಎಂದು ಅವರು ತಿಳಿಸಿದರು. ಕರ್ನಾಟಕ ಸರಕಾರದ ಮೀನುಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ನಾಗರಾಜು ಅವರು ಕಮ್ಮಟವನ್ನು ಉದ್ಘಾಟಿಸಿದರು. ಶ್ರೀ ಜಯ ಸಿ ಕೋಟ್ಯಾನ್ (ಮುಖ್ಯಸ್ಥರು, ಕರಾವಳಿ ಕರ್ನಾಟಕ ಮೀನುಗಾರರ ಕ್ರಿಯಾ ಸಮಿತಿ, ಉಚ್ಚಿಲ) ಹಾಗೂ ಶ್ರೀ ಯಶ್‌ಪಾಲ್ ಸುವರ್ಣ (ಅಧ್ಯಕ್ಷರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಮಂಡಳಿ) ಅವರು ಕಮ್ಮಟದ ಮುಖ್ಯ ಅತಿಥಿಗಳಾಗಿದ್ದರು.

ಅಜೀಂ ಪ್ರೇಂಜಿ ಫೌಂಡೇಶನ್‌ನ ಶ್ರೀ ಪ್ರಸನ್ನ ಸುರತ್ಕಲ್ ಇವರು ಸಂಶೋಧನೆಯ ವಿವರಗಳನ್ನು ಕಮ್ಮಟದಲ್ಲಿ ಪ್ರಸ್ತುತಪಡಿಸಿದರು. ಕೆನಡಾದ ಮ್ಯಾನಿಟೊಬಾ ವಿಶ್ವವಿದ್ಯಾಲಯ ಹಾಗೂ ಡ್ರೈಡ್ ಫಿಶ್ ಮ್ಯಾಟರ್ಸ್ ಎಂಬ ಯೋಜನೆಯ ಧನಸಹಾಯದ ಮೂಲಕ ಸಂಶೋಧನೆಗಳನ್ನು ನಡೆಸಲಾಗಿದೆ. ಕರ್ನಾಟಕದಲ್ಲಿ ಒಣಮೀನು ಉತ್ಪಾದನೆ ಹಾಗೂ ಮಾರುಕಟ್ಟೆಯ ರೂಪುರೇಖೆಗಳನ್ನು ಅರ್ಥೈಸಿಕೊಳ್ಳಲು ಹಾಗೂ ಅವುಗಳ ಪ್ರಾಮುಖ್ಯತೆಯನ್ನು ಅರಿತುಕೊಳ್ಳಲು ನಡೆಸಲಾದ ಏಕೈಕ ದೊಡ್ಡ ಮಟ್ಟದ ಪ್ರಯತ್ನ ಇದಾಗಿದ್ದು ಇದರ ಪ್ರಮುಖ ಅಂಶಗಳನ್ನು ಕಮ್ಮಟದಲ್ಲಿ ವಿವರಿಸಲಾಯ್ತು. ಕರ್ನಾಟಕದಲ್ಲಿ ಒಣಮೀನಿನ ಉತ್ಪಾದನೆ ಮತ್ತು ಮಾರಾಟದಿಂದ ಸಾವಿರಾರು ಮಂದಿಗೆ ಉದ್ಯೋಗಾವಕಾಶ ಸಿಕ್ಕಿದ್ದು ಇವರಲ್ಲಿ ಮಹಿಳೆಯರ ಪಾಲು ದೊಡ್ಡದಿದೆ; ಒಣಮೀನು ಸೇವಿಸುವವರಲ್ಲಿ ಹೆಚ್ಚಿನವರು ಬಡವರು ಹಾಗೂ ದುರ್ಬಲ ವರ್ಗಕ್ಕೆ ಸೇರಿದವರು (ಬುಡಕಟ್ಟು ಜನಾಂಗದವರು, ಎಸ್ಟೇಟುಗಳಲ್ಲಿ ದುಡಿಯುವ ಕೂಲಿ ಕಾರ್ಮಿಕರು, ಹಿಂದುಳಿದ ವರ್ಗದವರು ಇತ್ಯಾದಿ). ಹೀಗಿದ್ದರೂ, ಒಣಮೀನು ಉತ್ಪಾದನೆ ಹಾಗೂ ಬಳಕೆಯಲ್ಲಿ ಕೆಲವು ಪ್ರಮುಖ ಅಡಚಣೆಗಳಿವೆ. ಇವುಗಳಲ್ಲಿ ಪ್ರಮುಖವೆಂದರೆ: ಒಣಮೀನು ಉತ್ಪಾದನೆ ಮಾಡಲು ಜಾಗದ ಹಾಗೂ ಶುದ್ಧನೀರಿನ ಕೊರತೆ ಇರುವುದರಿಂದ ಉತ್ಪನ್ನದ ಗುಣಮಟ್ಟ ಕಳಪೆಯಾಗಿರುತ್ತದೆ; ಕರಾವಳಿಯ ಮೀನುಗಾರ ಜನಾಂಗಕ್ಕೆ ಸೇರಿದ ಯುವಜನತೆಯಲ್ಲಿ ಒಣಮೀನು ಉತ್ಪಾದನೆಯನ್ನು ಜೀವನೋಪಾಯವನ್ನಾಗಿ ಮಾಡಿಕೊಳ್ಳುವ ಬಗ್ಗೆ ಹೆಚ್ಚಿನ ಒಲವು ಇದ್ದಂತಿಲ್ಲ; ಒಳನಾಡಿನಲ್ಲಿ ತಾಜಾ ಮೀನು ಹಾಗೂ ಕೋಳಿಮಾಂಸ ಸುಲಭವಾಗಿ ಸಿಗುತ್ತಿರುವುದರಿಂದ ಅಲ್ಲಿನ ಯುವಜನತೆಯಲ್ಲಿ ಒಣಮೀನು ಬಳಕೆಯ ಬಗ್ಗೆ ಆಸಕ್ತಿ ಕಮ್ಮಿಯಾಗಿದೆ; ಹಾಗೂ, ಭಾರತದಲ್ಲಿ ತಯಾರಾಗುವ ಸಂಸ್ಕರಿತ ಮೀನು ಉತ್ಪನ್ನಗಳ ಪಾಲಿನಲ್ಲಿ ಒಣಮೀನಿನ ಪಾಲು ಕಡಿಮೆಯಾಗುತ್ತಿದ್ದು ಹೆಚ್ಚುವರಿ ಪಾಲು ಫಿಶ್‌ಮೀಲ್/ಮೀನೆಣ್ಣೆ ಉತ್ಪಾದನೆಗೆ ವರ್ಗಾವಣೆಯಾಗುತ್ತಿದೆ. ಕರ್ನಾಟಕದಲ್ಲಿ ಒಣಮೀನು ಕ್ಷೇತ್ರಕ್ಕೆ ಬೆಂಬಲ ನೀಡಲು ಸಂಶೋಧಕರು ಕೆಲವು ಸಲಹೆ ನೀಡಿದ್ದಾರೆ. ಅವುಗಳೆಂದರೆ: ಬಂದರುಗಳ ಆಸುಪಾಸಿನಲ್ಲಿ ಸರಕಾರವು ಒಣಮೀನು ಉತ್ಪಾದನೆಗೆ ವ್ಯವಸ್ಥಿತ ಸೌಲಭ್ಯಗಳನ್ನು ಹೊಂದಿರುವ ವಿಶಾಲ ಜಾಗದ ಹಾಗೂ ಶುದ್ಧನೀರಿನ ವ್ಯವಸ್ಥೆ ಮಾಡುವುದು ಹಾಗೂ ಬಜೆಟ್‌ನಲ್ಲಿ ಒಣಮೀನು ಕ್ಷೇತ್ರಕ್ಕೆ ಹಣ ಮೀಸಲಿಡುವುದು; ಒಣಮೀನು ಉತ್ಪಾದನೆ ಮಾಡಲು ಕರಾವಳಿಯುದ್ದಕ್ಕೂ ಮೀನುಗಾರಿಕಾ ಗುಚ್ಛಗ್ರಾಮಗಳನ್ನು ಗುರುತಿಸಿ ಉತ್ತೇಜನ ಕೊಡುವುದು; ಹೊಸ ತಲೆಮಾರಿನ ಒಣಮೀನು ಉತ್ಪಾದಕರಿಗೆ ತರಬೇತಿ ನೀಡುವುದು; ಅವಕಾಶವಿರುವಲ್ಲಿ, ಸರಕಾರದ ಮೂಲಕ ನಡೆಸಲ್ಪಡುವ ಹಾಸ್ಟೆಲು ಇತ್ಯಾದಿಗಳಲ್ಲಿ ನೀಡುವ ಊಟದಲ್ಲಿ ಒಣಮೀನನ್ನು ಸೇರಿಸುವುದು, ಹಾಗೂ ಇದಕ್ಕೆ ಬೇಕಾದ ಒಣಮೀನನ್ನು ಸಹಕಾರಿ ಸಂಘಗಳೊಂದಿಗೆ ಯಾ ಫೆಡರೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಸರಬಾರಜು ಮಾಡುವುದು; ಹಾಗೂ ಸರಕಾರದ ವಿವಿಧ ಯೋಜನೆಗಳಲ್ಲಿ ಸಿಗುವ ಅವಕಾಶವನ್ನು ಬಳಸಿಕೊಳ್ಳುವುದು-

ಇವುಗಳೆಂದರೆ *ಉತ್ಪಾದಕರ ಸಂಘ*ಗಳನ್ನು ಸ್ಥಾಪಿಸುವುದು (ಎಫ್‌ಪಿಓ), *ಒಂದು ಜಿಲ್ಲೆ ಒಂದು ಉತ್ಪನ್ನ* ಯೋಜನೆ, ಹಾಗೂ "ಆಹಾರೋತ್ಪನ್ನಗಳ ಸಣ್ಣ ಉತ್ಪಾದಕರನ್ನು ಔಪಚಾರಿಕವಾಗಿ ಸಂಘಟಿಸಲು ಪ್ರಧಾನಮಂತ್ರಿಯವರ ಯೋಜನೆ".

## ಚರ್ಚಿಸಲಾದ ವಿಷಯಗಳು

1. ಮೀನು ಲಭ್ಯತೆಗೆ ಫಿಶ್‌ಮೀಲ್ ಉತ್ಪಾದನೆಯಿಂದ ಯಾವುದೇ ತೊಡಕು ಉಂಟಾಗದು, ಅದೂ ಅಲ್ಲದೇ ಫಿಶ್‌ಮೀಲ್ ಉತ್ಪಾದನೆಯಿಂದಾಗಿ ಟ್ರಾಲರುಗಳು ತರುವ ಮೀನಿಗೆ ಬೇಡಿಕೆ ಕುದುರುವುದರಿಂದ ಮೀನುಗಾರರಿಗೆ ಪ್ರಯೋಜನವಾಗುತ್ತದೆ ಎಂದು ಶ್ರೀ ಅಚ್ಯುತ ಕಾಮತ್, ಅನ್‌ಫಲ್ ಫಿಶ್‌ಮೀಲ್ ಕಂಪೆನಿ, ಭಟ್ಕಳ ಇವರು ಅಭಿಪ್ರಾಯ ಪಟ್ಟರು. ಒಣಮೀನನ್ನು ಕೋಳಿಗಳ ಆಹಾರದಲ್ಲಿಯೂ ಬಳಕೆಮಾಡುತ್ತಾರಾಗಿ ಒಣಮೀನು ಉತ್ಪಾದನೆಯಿಂದ ಜನರ ಆಹಾರ ಸಿಗುವ ನಿಟ್ಟಿನಲ್ಲಿ ಹೆಚ್ಚಿನ ಸಹಾಯವಾಗದು. ಆದರೆ ಉಳಿದ ಸಭಿಕರು ಅಭಿಪ್ರಾಯದಂತೆ ಟ್ರಾಲರುಗಳು ಅನಿಯಂತ್ರಿತವಾಗಿ ಮೀನುಗಾರಿಕೆ ನಡೆಸುವುದರಿಂದಾಗಿ ಮೀನುಮರಿಗಳು ಪ್ರೌಢಾವಸ್ಥೆ ತಲುಪುವುದರೊಳಗೇ ಬಲೆಗೆ ಸಿಕ್ಕಿ ಮೀನುಗಳ ಸಂತಾನ ಕಡಿಮೆಯಾಗಬಹುದು.
2. ಶ್ರೀ ಶೋಭೇಂದ್ರ ಸಸಿಹಿತ್ಲು, ಅಧ್ಯಕ್ಷರು, ಸಸಿಹಿತ್ಲು ಮೀನುಗಾರರ ಸಹಕಾರ ಸಂಘ, ಇವರು ಒಣಮೀನು ತಯಾರಿಸಲು ಜಾಗದ ತೀವ್ರ ಕೊರತೆಯ ಕುರಿತು ಮಾತನಾಡಿದರು. ಹಳ್ಳಿಗಳಲ್ಲೂ ಕೂಡ ಮೀನುಗಾರಿಕೆಗೆ ಸಂಬಂಧಿಸದ ಚಟುವಟಿಕೆಗಳಿಗೆ ಜಾಗ ನೀಡಲಾಗುತ್ತಿದೆ ಉದಾಹರಣೆಗೆ ಸಸಿಹಿತ್ಲು ಗ್ರಾಮದಲ್ಲಿ 29 ಎಕರೆ ವ್ಯಾಪ್ತಿಯಲ್ಲಿರುವ ಕಾಡು ಹಾಗೂ ಸಮುದ್ರತೀರದ ಜಾಗವನ್ನು ಪ್ರವಾಸೋದ್ಯಮಕ್ಕಾಗಿ ನೀಡಲಾಗಿದೆ. ಆದರೆ 2011 ಹಾಗೂ 2019ರ ಕರಾವಳಿ ನಿಯಂತ್ರಿತ ವಲಯ ಅಧಿಸೂಚನೆಗಳ ಅನುಬಂಧ 4ರ ಕರಾವಳಿ ವಲಯದ ನಿರ್ವಹಣಾ ಯೋಜನೆಗಳ ಯೋಜನೆಗಳಿಗೆ ನೀಡಲಾಗಿರುವ ಮಾರ್ಗಸೂಚಿಗಳ ಪ್ರಕಾರ ಸಿಆರ್‌ಝಡ್ ಜಾಗದಲ್ಲಿ ಮೀನುಗಾರಿಕಾ ಹಳ್ಳಿ, ಮೀನುಗಾರರಿಗೆ ಸೇರಿದ ಸಾಮೂಹಿಕ ಜಾಗ, ಬಂದರು/ಜೆಟ್ಟಿಗಳು/ಮೀನುಗಾರಿಕಾ ಮೂಲಸೌಕರ್ಯ, ಒಣಮೀನು ತಯಾರಿಸುವ ಜಾಗ, ಮಂಜುಗಡ್ಡೆ ಕಾರ್ಖಾನೆ, ಆಸ್ಪತ್ರೆ, ಶಾಲೆ ಇತ್ಯಾದಿಗಳನ್ನು ಅಧಿಕೃತ ನಕ್ಷೆಗಳಲ್ಲಿ ಅವುಗಳ ವಿಸ್ತಾರಸಹಿತ ತೋರಿಸಬೇಕು. ಕೇಂದ್ರ ಹಾಗೂ ರಾಜ್ಯಗಳು ಮೀನುಗಾರರು ಮನೆ ಕಟ್ಟಿಕೊಳ್ಳಲು ಬೇಕಾದ ಜಾಗ, ಸ್ವಚ್ಛತೆ, ಸುರಕ್ಷತೆ, ಹಾಗೂ ವಿಪತ್ತು ನಿರ್ವಹಣೆ ಮಾಡುವ ಸಲುವಾಗಿ ಅಗತ್ಯವಿರುವ ಸ್ಥಳವನ್ನು ದೂರಗಾಮಿ ದೃಷ್ಟಿಯಿಂದ ಗುರುತಿಸಬೇಕು. ಹೀಗಾಗಿ ಕರಾವಳಿ ತೀರದ ಜಾಗದಲ್ಲಿ ಮೀನುಗಾರರ ಅಗತ್ಯಗಳಿಗೆ ಮೊದಲ ಆದ್ಯತೆ ಕೊಡಬೇಕೆಂದು ಸರಕಾರದ ನಿಯಮಾವಳಿಗಳೇ ಹೇಳಿವೆ. ಶ್ರೀ ಶೋಭೇಂದ್ರರು ಸಣ್ಣಗಾತ್ರದ ಎಳೆಪ್ರಾಯದ ಮೀನುಗಳನ್ನು ಹಿಡಿಯುವುದರಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಆತಂಕ ವ್ಯಕ್ತಪಡಿಸಿದರು.
3. ಶ್ರೀ ಶಿವಕುಮಾರ್, ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ, ಇವರು ಒಣಮೀನು ಗುಣಮಟ್ಟ ಹೆಚ್ಚಿಸುವ ಕ್ರಮಗಳ ಕುರಿತು ಮಾತನಾಡಿದರು. ಇದಕ್ಕೆ ಉತ್ತರಿಸುತ್ತಾ ಪ್ರೊಫೆಸರ್ ರಾಮಚಂದ್ರ ಭಟ್ಟರು ಬಂದರುಗಳಲ್ಲಿ ಒಣಮೀನು ತಯಾರಿಕೆಗೆಂದೇ ಕಾಯ್ದಿರಿಸಿದ ವಿಶಾಲ ಜಾಗ, ಶುದ್ಧನೀರಿನ ವ್ಯವಸ್ಥೆ, ಕೊಳಚೆ ನೀರು ಹರಿದುಹೋಗಲು ಒಳಚರಂಡಿ ವ್ಯವಸ್ಥೆ, ಇತ್ಯಾದಿಗಳನ್ನು ಒದಗಿಸಿದಲ್ಲಿ ಗುಣಮಟ್ಟ ಸುಧಾರಿಸಲು ಸಾಧ್ಯವಿದೆ ಎಂದರು. ಪ್ರಸಕ್ತ ಸಮಯದಲ್ಲಿ ಸಿಗುತ್ತಿರುವ ಸೌರಶಕ್ತಿಯ ಡ್ರೈಯರುಗಳ ಕಾರ್ಯವೈಖರಿ ಸಮಾಧಾನಕರವಾಗಿರುವುದಿಲ್ಲದಿರುವುದರಿಂದ ಸದ್ಯಕ್ಕೆ ಅವುಗಳ ಅಗತ್ಯವಿರುವುದಿಲ್ಲ. ಒಣಮೀನು ಉತ್ಪಾದಕರಿಗೆ ಅಗತ್ಯವಿರುವ ಉಪ್ಪು, ಟಾರ್ಪಾಲುಗಳು, ಸಾಗಾಣಿಕೆಯ ಸಲಕರಣೆಗಳಾದ ಬಿದಿರಿನ ಬುಟ್ಟಿ/ಪ್ಲಾಸ್ಟಿಕ್ ಚೀಲಗಳು/ಪ್ಲಾಸ್ಟಿಕ್ ಡಬ್ಬಿಗಳು, ಇತ್ಯಾದಿ ವ್ಯವಸ್ಥೆಗಳನ್ನು ಸರಕಾರದ ಮೂಲಕ ಸಹಾಯ ಮಾಡಬಹುದು.
4. ಬಂದರುಗಳಲ್ಲಿ ಒಣಮೀನು ಉತ್ಪಾದನೆಗೆ ಬಳಸುವ ಜಮೀನು ಉತ್ಪಾದಕರ ಹೆಸರಿನಲ್ಲಿ ಇಲ್ಲದೇ ಇರುವುದರಿಂದ ಹಾಗೂ ಅವರಿಗೆ ಅಧಿಕೃತ ಗುತ್ತಿಗೆ ಪತ್ರಗಳನ್ನೂ ನೀಡದೇ ಇರುವುದರಿಂದ ಬ್ಯಾಂಕು ಇತ್ಯಾದಿ ಸಂಸ್ಥೆಗಳಿಂದ ಹಣಕಾಸಿನ ನೆರವು ಪಡೆದುಕೊಳ್ಳುವುದು ಅಸಾಧ್ಯವಾಗಿದೆ ಎಂದು ಡಾ| ಗುಣಕರ್ ಸುರತ್ಕಲ್ ಇವರು ತಿಳಿಸಿದರು. ಸರಕಾರದ ವಿವಿಧ ಯೋಜನೆಗಳಾದ "ಒಂದು ಜಿಲ್ಲೆ ಒಂದು ಉತ್ಪನ್ನ", ಪ್ರಧಾನ ಮತ್ಸ್ಯ ಸಂಪದ ಯೋಜನೆ ಇತ್ಯಾದಿಗಳ ಪ್ರಯೋಜನ ಪಡೆದುಕೊಳ್ಳಲು ಒಣಮೀನು ಉತ್ಪಾದಕರಿಗೆ ಸಾಧ್ಯವಾಗುತ್ತಿಲ್ಲ.

5. ಶ್ರೀಮತಿ ಸುಶ್ಮಿತಾ ರಾವ್, ಮೀನುಗಾರಿಕಾ ಉಪನಿರ್ದೇಶಕರು, ದಕ್ಷಿಣ ಕನ್ನಡ ಇವರು ಹಿಂದಿನ ದಶಕಗಳಲ್ಲಿ ಸರಕಾರದ ಮೂಲಕವೇ ಬಂದರುಗಳಲ್ಲಿ ಒಣಮೀನು ಉತ್ಪಾದನೆಗೆ ಪ್ರೋತ್ಸಾಹ ಕೊಡಲಾಗುತ್ತಿತ್ತು ಹಾಗೂ ಅಗತ್ಯ ವಸ್ತುವಾದ ಉಪ್ಪನ್ನು ಖರೀದಿಸಲು ಸಹಾಯಧನ ನೀಡಲಾಗುತ್ತಿತ್ತು ಎಂದು ವಿವರಿಸಿದರು. ಹೀಗಾಗಿ, ಇಂಥ ಪ್ರೋತ್ಸಾಹಕ್ರಮಗಳನ್ನು ಇನ್ನೂ ಹೆಚ್ಚಿನ ಆಧುನಿಕ ವ್ಯವಸ್ಥೆಗಳಾದ ಒಳಚರಂಡಿ, ಶುದ್ಧನೀರು, ಶೇಖರಣಾ ಕೊಠಡಿಗಳು ಇತ್ಯಾದಿಗಳೊಂದಿಗೆ ಪುನರಾರಂಭಿಸುವ ಅಗತ್ಯವಿದೆ. ಎಂದು ಅಭಿಪ್ರಾಯ ಪಡಲಾಯಿತು.
6. ಶ್ರೀಯುತ ನಾಗರಾಜು, ಜಂಟಿ ನಿರ್ದೇಶಕರು, ಮಲ್ಪೆ ಬಂದರು ಪ್ರಾಧಿಕಾರ, ಇವರು ಬಂದರುಗಳಲ್ಲಿ ಶೇಕಡಾ 25ರಷ್ಟು ಜಾಗವನ್ನು ಒಣಮೀನು ಉತ್ಪಾದನೆಗೆ ಮೀಸಲಿಡಲು ಪ್ರಯತ್ನಿಸಬೇಕು ಎಂದು ಅಭಿಪ್ರಾಯಪಟ್ಟರು.
7. ಶ್ರೀಯುತ ಜಯ ಸಿ ಕೋಟ್ಯಾನ್, ಅಧ್ಯಕ್ಷರು, ಕರ್ನಾಟಕ ಕರಾವಳಿ ಮೀನುಗಾರರ ಕ್ರಿಯಾ ಸಮಿತಿ, ಉಚ್ಚಿಲ, ಉಡುಪಿ, ಇವರು ಮಹಿಳಾ ಮೀನುಗಾರರು ಎದುರಿಸುತ್ತಿರುವ ಸವಾಲುಗಳು ಹಾಗೂ ಅವರ ಬೇಡಿಕೆಗಳ ಕುರಿತು ವರದಿ ತಯಾರಿಸಿ ಸರಕಾರಕ್ಕೆ ಸಲ್ಲಿಸುವಂತೆ ಮೀನುಗಾರಿಕಾ ಇಲಾಖೆಯ ಅಧಿಕಾರಿಗಳಲ್ಲಿ ಆಗ್ರಹಿಸಿದರು. ಸರಕಾರದೊಂದಿಗೆ ಈ ವಿಷಯದಲ್ಲಿ ಮಾತುಕತೆ ನಡೆಸುವ ಸಂದರ್ಭದಲ್ಲಿ ತಾವು ಬೆಂಬಲ ನೀಡುವುದಾಗಿಯೂ ಶ್ರೀ ಕೋಟ್ಯಾನ್‌ರು ತಿಳಿಸಿದರು.
8. ಶ್ರೀಯುತ ಯಶ್‌ಪಾಲ್ ಸುವರ್ಣ, ಅಧ್ಯಕ್ಷರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಮಂಡಳಿ, ಇವರು ಮಾತನಾಡಿ "ಭವಿಷ್ಯದಲ್ಲಿ ಮೀನುಗಾರಿಕೆ" ಕುರಿತಾಗಿ ಇನ್ನಷ್ಟು ಚರ್ಚೆಯಾಗಬೇಕೆಂದು ಅಭಿಪ್ರಾಯ ಪಟ್ಟರು. ಒಣಮೀನು ಉತ್ಪಾದನೆ ಹಾಗೂ ಮೀನು ಸಂಸ್ಕರಣೆಗೆ ಸಂಬಂಧಿಸಿದಂತೆ ಬೇರೆಯದೇ ಆದ ನೀತಿ ನಿಯಮಾವಳಿ ರೂಪಿಸುವ ಅಗತ್ಯವಿದ್ದು, ಒಣಮೀನು ಉತ್ಪಾದನೆಗೆ ಮೀಸಲು ಜಾಗದ ವ್ಯವಸ್ಥೆ ತುರ್ತಾಗಿ ಆಗಬೇಕು ಎಂದು ಹೇಳಿದರು. ಸರಕಾರದ ಬಜೆಟ್‌ನಲ್ಲಿ ಒಣಮೀನು ಕ್ಷೇತ್ರಕ್ಕೆ ಬೆಂಬಲ ಸಿಗಬೇಕೆಂದು ಅವರ ಆಗ್ರಹಿಸಿದರು. ಮಂಡಳಿಯ ವತಿಯಿಂದ ಕರಾವಳಿಯ ಮೂರೂ ಜಿಲ್ಲೆಗಳ ಮೀನುಗಾರರ ಸಹಕಾರಿ ಸಂಘಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ಮೀನುಗಾರರಿಗೆ ಹಾಗೂ ಒಣಮೀನು ಕ್ಷೇತ್ರಕ್ಕೆ ಅತೀ ಅಗತ್ಯವಿರುವ ಸರಕಾರದ ಬೆಂಬಲ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಈ ಮೇಲಿನ ವಿಷಯಗಳ ಆಧಾರದಲ್ಲಿ ಕರ್ನಾಟಕ ಸರಕಾರದ ಮೀನುಗಾರಿಕಾ ಇಲಾಖೆ ಹಾಗೂ ಸ್ನೇಹಕುಂಜ ಟ್ರಸ್ಟ್ ಈ ಕೆಳಕಂಡ ಕ್ರಮಗಳನ್ನು ಅನುಸರಿಸಬಹುದಾಗಿದೆ.

1. ಬಂದರುಗಳಲ್ಲಿ ಈ ಹಿಂದೆ ಒಣಮೀನು ಉತ್ಪಾದನೆಗೆಂದು ಮೀಸಲಿಟ್ಟಿದ್ದ ಜಾಗವನ್ನು ಪುನಃ ಒಣಮೀನು ಉತ್ಪಾದನೆಗೆಂದೇ ಬಳಸಲಾಗುವಂತೆ ಕ್ರಮ ಕೈಗೊಳ್ಳಬೇಕು. ಬಂದರಿನ ಒಟ್ಟು ವಿಸ್ತೀರ್ಣದ ಶೇಕಡಾ 25ರಷ್ಟನ್ನು ಒಣಮೀನು ಉತ್ಪಾದನೆ ಮಾಡಲು ಕಾಯ್ದಿರಿಸಬೇಕು.
2. ಪ್ರಸ್ತುತ ನಿರ್ಮಾಣದಲ್ಲಿರುವ ಹಾಗೂ ಇನ್ನು ಮುಂದೆ ನಿರ್ಮಿಸಲಾಗುವ ಬಂದರುಗಳಲ್ಲಿಯೂ ಶೇಕಡಾ 25ರಷ್ಟು ಜಾಗವನ್ನು ಒಣಮೀನು ಉತ್ಪಾದನೆಗೆ ಮೀಸಲಿಟ್ಟು, ಅವುಗಳಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು.
3. ಸರಕಾರದ ಮೂಲಕ ನಡೆಸಲ್ಪಡುವ ಹಾಸ್ಟೆಲು ಇತ್ಯಾದಿಗಳಲ್ಲಿ ನೀಡುವ ಊಟದಲ್ಲಿ ಒಣಮೀನಿನಿಂದ ತಯಾರಿಸಿದ ಖಾದ್ಯಗಳನ್ನು ಸೇರಿಸುವುದು, ಹಾಗೂ ಇದಕ್ಕೆ ಬೇಕಾದ ಒಣಮೀನನ್ನು ಸಹಕಾರಿ ಸಂಘಗಳೊಂದಿಗೆ ಯಾ ಫೆಡರೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಸರಬಾರಜು ಮಾಡುವುದು
4. ಮೀನುಗಾರಿಕಾ ಇಲಾಖೆಯ ಒಟ್ಟು ವಾರ್ಷಿಕ ಬಜೆಟ್‌ನ ಕನಿಷ್ಠ ಶೇಕಡಾ 12 ಪಾಲನ್ನು ಒಣಮೀನು ಉತ್ಪಾದನೆಗೆ ಅಗತ್ಯವಿರುವ ಅಂಗಳವನ್ನು, ಶುದ್ಧನೀರಿನ ಸರಬರಾಜು, ಒಳಚರಂಡಿ, ವಿದ್ಯುತ್ ಹಾಗೂ ದೀಪ/ಬೆಳಕು, ಸಾಗಾಟದ ವ್ಯವಸ್ಥೆ, ಹರಾಜು ವ್ಯವಸ್ಥೆ ಇತ್ಯಾದಿಗಳನ್ನು ಒದಗಿಸಿಕೊಡಬೇಕು.
5. ಸಾಕಷ್ಟು ಜಾಗ, ಶುದ್ಧನೀರಿನ ವ್ಯವಸ್ಥೆ ಇರುವ ಮೀನುಗಾರಿಕಾ ಗ್ರಾಮಗಳನ್ನು ಕರಾವಳಿಯ ಉದ್ದಕ್ಕೂ ಅಲಲ್ಲಿ ಗುರುತಿಸಿ ಅವುಗಳಲ್ಲಿ ಒಣಮೀನು ಉತ್ಪಾದನೆಗೆ ವಿಶೇಷ ಉತ್ತೇಜನ ಕೊಡುವುದು
6. ಕೇಂದ್ರ ಹಾಗೂ ರಾಜ್ಯ ಸರಕಾರೀ ಯೋಜನೆಗಳಲ್ಲಿ ಒಣಮೀನು ಉತ್ಪಾದನೆ ಹಾಗೂ ಮಾರಾಟವನ್ನು ಉತ್ತೇಜಿಸಲು ಕ್ರಮ ಕೈಗೊಳ್ಳುವುದು, ಹಾಗೂ ಬ್ಯಾಂಕುಗಳು ಹಣಕಾಸಿನ ಸಹಾಯ ಒದಗಿಸಲು ಸಹಾಯಕವಾಗುವಂತೆ ಯೋಜನೆಗಳನ್ನು ರೂಪಿಸುವುದು

7. ಈಗಿರುವ ಮೀನಗಾರರ ಸಹಕಾರಿ ಸಂಘಗಳನ್ನು ಬಲಪಡಿಸಿ, ಅವುಗಳ ಮೂಲಕ ಹೊಸ ವಿಷಯಗಳನ್ನು ತಲುಪಿಸುವ, ಸಾಲ ಹಾಗೂ ಇತರೇ ಸೌಲಭ್ಯ ಕೊಡಿಸುವ ವ್ಯವಸ್ಥೆ ಮಾಡುವುದು

8. ಮೀನುಗಾರರ ಹೊಸ ಸಂಘಗಳನ್ನು ಸ್ಥಾಪಿಸಿ ಅವುಗಳ ನಡುವಿನ ಸಂಬಂಧ ಬಲಪಡಿಸುವುದು. ಮೀನು ಮಾರಾಟವನ್ನು ಸಂಘಗಳ ಒಂದು ಪ್ರಮುಖ ಚಟುವಟಿಕೆಯನ್ನಾಗಿ ಕೈಗೊಳ್ಳುವುದು.

9. ಸಾಂಪ್ರದಾಯಿಕವಾಗಿ ಮೀನುಗಾರರಿಗೆಂದು ಪರಿಗಣಿತ ಜಾಗವನ್ನು ಅವರಿಗೇ ಮೀಸಲಿಟ್ಟು ಸಿಆರ್‌ಝಡ್ ನಿಯಮಾವಳಿಗಳನ್ನು, ಅವುಗಳ ಅನುಷ್ಠಾನವನ್ನು ಬಲಪಡಿಸಿ ಸೂಚನೆ ಹೊರಡಿಸಬೇಕು. ಪ್ರವಾಸೋದ್ಯಮದ ಸಲುವಾಗಿ ಹೊರಡಿಸಲಾಗಿರುವ 2019ರ ಕರಾವಳಿ ವಲಯ ಮಾಸ್ಟರ್ ಪ್ಲಾನ್ ಅನ್ನು ಅನುಷ್ಠಾನಗೊಳಿಸುವ ಮುನ್ನ ಇದರಿಂದ ಮೀನುಗಾರರ ಮೇಲಿನ ಸಾಧಕ-ಬಾಧಕಗಳ ಕುರಿತು ಮೀನುಗಾರಿಕೆ ಇಲಾಖೆಯಿಂದ ಸವಿವರ ವರದಿ ತಯಾರಿಸಿಕೊಳ್ಳಬೇಕು.

# Proceedings of the
# Consultative Workshop on “Dried Fish Matters in Karnataka”

Held on July 16, 2022 at The Nethravathi Hall, Dakshina Kannada Zilla Panchayat Premises in Mangaluru

This report presents the events, discussions held, and the feedback from the participants in the Consultative Workshop on ‘Dried Fish Matters in Karnataka’ held on July 16, 2022 in Mangaluru. The workshop was organized by the School of Development, Azim Premji University, Bengaluru, and Snehakunja Trust, Honnavara, in association with the Dakshina Kannada Zilla Panchayat, Mangaluru. The workshop was a part of the community outreach under the Karnataka component of the “Dried Fish Matters” project conducted by the Azim Premji University with funding support from University of Manitoba, Canada. The workshop with 45 participants represented different stakeholder groups such as fish processors, traders, community-based organizations, state fisheries department officers, and researchers.

Prof. Ramachandra Bhatta, President, Snehakunja Trust, welcomed the guests and participants. Prof. Amalendu Jyotishi School of Development Azim Premji University presented the background and objectives of the project. The overall objective of the project was to gain a better understanding of the dried fish markets of Karnataka by exploring the production and marketing of dried fish products in the state with respect to ecological, socioeconomic, and food security dimensions. The workshop was inaugurated by Shri. Nagaraju, Joint Director, Malpe Fisheries Harbor Authority, Government of Karnataka with Shri. Yashpal Suvarna, President, Dakshina Kannada and Udupi District Cooperative Fish Marketing Federation and Shri. Jaya C Kotian Chairman, Coastal Karnataka Fishers Acton Committee as guests of honour.

Shri Prasanna Surathkal, from the Azim Premji Foundation, made a presentation in Kannada, explaining the study methodology, data collection and results of the analysis of some of the major issues in the context of dried fish markets of the Karnataka state. Key results from the research are: dried fish production and marketing create thousands of jobs in coastal and inland areas of Karnataka, with women playing a major role; prominent consumer groups of dried fish include poor and vulnerable sections of the society including the tribals, migrant laborers, backward classes etc.; the share of dried fish in the India’s overall processed seafood production quantities is declining, mostly at the expense of fishmeal and fish oil production. There are major challenges facing the dried fish segment, including: severe lack of land and clean water for dried fish production at/near major harbors, leading to inferior quality of dried products; declining interest among the youth of the fisher community of coastal Karnataka to take up dried fish production as a livelihood option, thus putting into question the future of this important segment; and declining interest among younger generation in consuming dried fish products, especially in hinterland areas, given the better availability of fresh fish and chicken there. The researchers have offered the following solutions to overcome these challenges: provision of better land and clean water facilities at or around the major harbors for dried fish production; budgetary allocations to the dried fish segment; identification of clusters of fishing villages along the coast where dried fish production is encouraged; training a new generation of dried fish processors; wherever possible, include dried fish in the meals offered as part of government departmental welfare programs, for example in hostels and school meal programs (the concerned governmental departments may draft contract agreements with fisher cooperatives or federations for the supply of dried fish for such programs); and, encouraging dried fish processors under the available government schemes such as the Fish Producer Organizations (FPOs), One District One Product; and, Pradhan Mantri Formalization of Micro Food Processing Enterprises, PMFME.

## Important Discussions

1. Mr. Achhuta Kamat, Manager Anfal Fishmeal company Bhatkal, observed that it is not true that the access to fish has declined due to the competition from the fishmeal companies. On the other the demand and procurement from fishmeal and oil companies has provided good market to the trawl landings through which the trawl boats are able to breakeven. He also commented that a part of the dried fish is used for poultry, shrimp and fish feed and a part goes for human consumption. Thus, dried fish is not really helping to meet food security directly. But it was countered by others stating that the unabated increase of trawl fishing for juvenile catch to supply to fishmeal companies has resulted in biodiversity loss and potential increase of landings
2. Mr. Shobendra Sasihithlu, President of Fishermen co-operative society, Sasihithlu, observed that the scarcity of space for drying has become a major problem even in rural areas due to the allocation of the space for alternative activities and completely ignoring the demand from the dried fish processors. He narrated the case of Sasihitlu where 29 acres of forest land on the beachside was allocated to Tourism Department without consulting the local stakeholders and also without making any provision for fishery related activities. The Coastal Regulation Zone Notification, 2011 and 2019, Annexure -IV Guidelines For Preparation Of Coastal Zone Management Plans 5 (Iii) States That *In the CRZ areas, the fishing villages, common properties of the fishermen communities, fishing jetties, ice plants, fish drying platforms or areas infrastructure facilities of fishing and local* communities *such as dispensaries, roads, schools, and the like, shall be indicated on the cadastral scale maps. States and Union territories shall prepare detailed plans for long term housing needs of coastal fisher communities in view of expansion and other needs, provisions of basic services including sanitation, safety, and disaster preparedness.* Mr. Shobendra argued that all other activities should be undertaken after allocating space for fishery related activities. Even those areas which are being used for fishery activities are allocated for other tourism and industrial pipelines depriving the fishers from their customary rights over these areas. He gave the example his own fishing village where, due to development of Munda beach, fisherwomen lost the land meant for fish drying activities. Further, restrictions must be imposed on catching juvenile fish.
3. Mr. Shiva Kumar, Deputy Director of Fisheries, Udupi, wanted to know the methods that could be adopted for improving the quality of dried fish even with declining beach space for fish drying. Dr. Ramachandra Bhatta observed that the quality of dried fish could be improved by providing good infrastructure such as modern fish drying yard within the port limits. The drying yard must have access to good water supply, drainage, storage facilities and transportation services. The fisher women are capable of producing high quality dried fish without solar dryers. Solar driers currently available for fish drying do not produce dried fish of satisfactory quality. Therefore, the present thinking that solar dryers would solve the problem of space is not based on facts. Instead, the government should provide basic necessities such as tarpaulins, transportation materials such as salt, bamboo baskets/plastic crates/gunny bags etc. to the processors.
4. Absence of lease rights over the port land in spite of the fact that the women were using these areas for decades was identified as one of the major issues in accessing the institutional finance by the small-scale fish processors. Dr. Gunakar observed that in spite of several schemes such as Matsya Sampada and "One District One Product" none of the women received loan from any bank in spite of several attempts by the nodal officers. In the absence of lease certificates issues by the port and fisheries department the processors were denied soft loans.
5. Mrs. Sushmitha Rao, Deputy Director of Fisheries, Dakshina Kannada, recalled that land in the harbors used to be allocated to dried fish processors and were encouraged to produce better quality fish with provisions like subsidized salt. The State Fisheries Directorate should identify the areas

which are traditionally allocated and reserved for fish processors and re-allocated to fish processors by creating all modern facilities for fish drying such as water, drainage and storage shed facilities.

6. Mr. Nagaraju Joint Director of Fisheries, Malpe Harbor Authority promised to include the deeds of the fish processors by sending a proposal to reserve 25% of the port area for fish processors.
7. Mr. Jaya C Kotian, President, Karavali Karnataka Meenugarara Kriya Samiti Uchila, Udupi district, requested the officials of the Department of Fisheries to prepare a report on the problems and demands of fisherwomen and bring to the notice of government. He assured the officials that he will accompany them at the time of negotiation.
8. Mr. Yashpal Suvarna, president, D.K and Udupi district, Co-operative Fish Marketing Federation Mangaluru-
   - There is a need to hold discussion on "Fisheries in Future"
   - Need to have a separate Act for dry fish and post harvest activities.
   - Need to reserve the land for fish drying activities.
   - The budgetary allocations by the state and the banks should ensure a fair deal to dried fish processors.

     Mr. Suvarna also assured that he as President of the District Cooperative Federation will organize a meeting with all the primary fishers' cooperatives of all the three districts and take-up measures to address the problems with State support.

## FOLLOW-UP ACTIONS TO BE INITIATED BY SNEHAKUNJA TRUST IN ASSOCIATION WITH DEPARTMENT OF FISHERIES, KARNATAKA

1. Develop a proposal to the Government to re-allocate the areas which was earlier allocated and used by the dry fish producers with a minimum of 25% of the total port limits.
2. Recommend mandatory allocation of 25% of space within the port area in all ongoing and upcoming ports.
3. Inclusion of dried fish in the meals offered at hostels and schools run by government welfare departments; government departments shall draft contract agreements with fisher cooperatives or federations for the supply of dried fish for such programs
4. Allocation of at least 12% of the total state fisheries budget to the construction of fish drying yard with all facilities (good quality water, drying platform, drainage system, storage sheds, lights, electricity, transportation and auction halls.
5. Identifying fishing villages across the coast where the required land, water, and accessibility facilities are available, for encouraging dried fish production
6. Recommend for including dry fish production and marketing as one of the viable schemes in all central and state schemes and financial support from commercial banks and cooperatives.
7. Strengthens fisheries cooperatives to provide extension services, credit and other inputs to dried fish processors.
8. Establishment of new sections within the existing cooperatives and starting of new collectives for networking. Increased emphasis on fish marketing through cooperatives.
9. Strengthen the CRZ regulations to identify, demarcate and notify the coastal areas that are traditionally used by the dry fish producers for their processing activities. The State Department of Fisheries to develop Master Plan for Fisheries Development in CRZ areas before the land is allocated for Tourism Plan for Coastal Karnataka under Coastal Zone Master Plan 2019 Prepared by Department of Tourism, Government of Karnataka and approved by the Karnataka State Coastal Zone Management Authority.

## Some photos from the workshop




